## ದಿನಾಂಕ 12.01.2011 ರಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಸಭಾಂಗಣದಲ್ಲಿ ನಡೆದ ಜೆಎನ್‌ನರ್ಮ್ ಯೋಜನೆಯ ಕಾರ್ಯಕಾರಿ ಸಮಿತಿಯ ಪ್ರಗತಿಪರಿಶಿಲನಾ ಸಭೆ ನಡವಳಿಗಳು

ಸಭೆ ದಿನಾಂಕ : 12.01.2011
ಸಭೆ ಸಮಯ : ಸಂಜೆ 4.00 ಘಂಟೆ
ಸಭೆಯ ಅಧ್ಯಕ್ಷತೆ : ಜಿಲ್ಲಾಧಿಕಾರಿಗಳು, ಮೈಸೂರು ಹಾಗೂ ವಿಶೇಷಾಧಿಕಾರಿಗಳು ಜೆಎನ್‌ನರ್ಮ್

| ಕ್ರ. ಸಂ. | ಹಾಜರಿದ್ದ ಸದಸ್ಯರು | ಕ್ರ. ಸಂ. | ಹಾಜರಿದ್ದ ಇತರೆ ಅಧಿಕಾರಿಗಳು |
|---|---|---|---|
| 1. | ಶ್ರೀ ಕೆ.ಎಸ್. ರಾಯ್ಕರ್, ಆಯುಕ್ತರು, ಮೈನಪಾ, ಮೈಸೂರು. | 1. | ಶ್ರೀ ವೀರಭದ್ರಯ್ಯ ಕಾರ್ಯಪಾಲಕ ಇಂಜಿನಿಯರ್, ಮೈನಪ್ರಾ, ಮೈಸೂರು. |
| 2. | ಶ್ರೀ ಪಿ.ಎಸ್. ಜಯಣ್ಣ, ಆಯುಕ್ತರು, ಮೈನಪ್ರಾ, ಮೈಸೂರು. | 2. | ಶ್ರೀ ಎ.ಸಿ. ಚಾಮರಾಜೆಗೌಡ್, ಕಾರ್ಯಪಾಲಕ ಇಂಜಿನಿಯರ್, ಜೆಎನ್‌ನರ್ಮ್, ಮೈನಪಾ, ಮೈಸೂರು. |
| 3. | ಶ್ರೀ ಬಿ.ಕೆ. ಸುರೇಶ್ ಬಾಬು, ಅಧೀಕ್ಷಕ ಇಂಜಿನಿಯರ್, ಜೆಎನ್‌ನರ್ಮ್, ಮೈನಪಾ, ಮೈಸೂರು. | 3. | ಶ್ರೀಮತಿ ವಿದ್ಯಾಕುಮಾರಿ, ಕಾರ್ಯದರ್ಶಿ, ಮೈನಪ್ರಾ, ಮೈಸೂರು. |
| 4. | ಶ್ರೀ ಶಿವಕುಮಾರ್, ಅಧೀಕ್ಷಕ ಇಂಜಿನಿಯರ್, ಮೈನಪ್ರಾ, ಮೈಸೂರು. | 4. | ಶ್ರೀಮತಿ ಝುಹಿರಾ ನಸೀಮ, ಯೋಜನಾ ನಿರ್ದೇಶಕರು, ಡಿಯುಡಿಸಿ, ಮೈಸೂರು |
| 5. | ಶ್ರೀ ಶ್ರೀನಿವಾಸ್, ವಿಭಾಗೀಯ ನಿಯಂತ್ರಣ ಅಧಿಕಾರಿ, ಕರಾರಸಾಸ, ಮೈಸೂರು | 5. | ಶ್ರೀ ಕುಮಾರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕರಾರಸಾಸ, ಮೈಸೂರು |
| 6. | ಶ್ರೀ ಸುಬ್ಬೇಗೌಡ. ಎಸ್ ಕಾರ್ಯಪಾಲಕ ಇಂಜಿನಿಯರ್, ಕೆಯುಡಬ್ಲ್ಯೂಎಸ್ & ಡಿಬಿ, ಮೈಸೂರು | 6. | ಶ್ರೀ ವಿಶ್ವನಾಥ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕೆಎಸ್‌ಸಿಬಿ, ಮೈಸೂರು. |
| 7. | ಶ್ರೀ ಡಿ. ಬಿಳಿಗಿರಿರಂಗಸ್ವಾಮಿ, ಕಾರ್ಯಪಾಲಕ ಇಂಜಿನಿಯರ್, ಕೆಎಸ್‌ಸಿಬಿ, ಮೈಸೂರು | 7. | ಶ್ರೀ ಕಿಶೋರ್‌ಚಂದ್ರ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಮೈ.ನಪ್ರಾ, ಮೈಸೂರು. |
| 8. | ಶ್ರೀ ಸಿ.ಎಸ್. ನಾಗರಾಜು ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಮೈಸೂರು (ಪ್ರತಿನಿಧಿ ಶ್ರೀ ಶ್ರೀನಿವಾಸ್) | 8.<br>9. | ಎಲ್ಲಾ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳು, ಜೆಎನ್‌ನರ್ಮ್, ಮೈನಪಾ, ಮೈಸೂರು.<br>ಶ್ರೀ ವಿ.ಎನ್. ಪ್ರಸಾದ್, ಮೆ॥ ಸ್ವ್ಯಾನ್, ಕನ್ಸಲಟೆಂಟ್ಸ್, ಮೈಸೂರು. |

ಪ್ರಾರಂಭದಲ್ಲಿ ಅಧೀಕ್ಷಕ ಇಂಜಿನಿಯರ್ ಜೆಎನ್‌ನರ್ಮ್, ಮೈಸೂರು ಮಹಾನಗರ ಪಾಲಿಕೆ ಇವರು ಮಾನ್ಯ ಅಧ್ಯಕ್ಷರನ್ನು ಹಾಗೂ ಸಮಿತಿಯ ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ದಿನಾಂಕ 31.12.2010 ರ ಅಂತ್ಯಕ್ಕೆ ರೂ. 398.48 ಕೋಟಿಗಳ ಅನುದಾನದ ಬಿಡುಗಡೆಗೆ ಎದುರಾಗಿ ರೂ. 533.40 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಅಧೀಕ್ಷಕ ಇಂಜಿನಿಯರ್‌ರವರು ತಿಳಿಸಿದರು. 13 ಯೋಜನೆಗಳು ಮಂಜೂರಾಗಿದ್ದು, ಇದರ ಅನುಮೋದಿತ ಮೊತ್ತ ರೂ. 1107.09 ಕೋಟಿಗಳಾಗಿರುತ್ತದೆ.

ಮೈಸೂರಿನಲ್ಲಿ ಜೆಎನ್‌ನರ್ಮ್ ಯೋಜನೆಯ ಕಾಮಗಾರಿಗಳನ್ನು ವಿವಿಧ ಅನುಷ್ಠಾನ ಸಂಸ್ಥೆಗಳು ನಿರ್ವಹಿಸುತ್ತಿದ್ದು, ಅನುಷ್ಠಾನ ಸಂಸ್ಥೆವಾರು ಪ್ರಗತಿಯನ್ನು ಅಧ್ಯಕ್ಷರು ಪರಿಶೀಲಿಸಿದರು.

### 1. ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ಕಾಮಗಾರಿಗಳು :

ಮೈಸೂರು ನಗರದಲ್ಲಿ ಒಟ್ಟಾರೆಯಾಗಿ 81 ಕೊಳಚೆ ಪ್ರದೇಶಗಳನ್ನು ಗುರುತಿಸಲಾಗಿದ್ದು, ಅದರಲ್ಲಿ 62 ಪ್ರದೇಶಗಳನ್ನು ಘೋಷಿಸಲಾಗಿದ್ದು, ಉಳಿದ 19 ಪ್ರದೇಶಗಳನ್ನು ಘೋಷಿಸಬೇಕಾಗಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್, ಕೆಎಸ್‌ಸಿಬಿ ಯವರು ವಿವರಿಸಿದರು.

ಕೊಳಚೆ ಪ್ರದೇಶದ ಪುನರ್ವಸತಿ ಕಾಮಗಾರಿಗಳನ್ನು 3 ಹಂತಗಳಲ್ಲಿ ಕೈಗೆತ್ತಿಕೊಳ್ಳಲಾಗಿರುತ್ತದೆ.

**ಹಂತ – 1 :** ಮೊದಲನೆ ಹಂತದಲ್ಲಿ 2,788 ಮನೆಗಳ ನಿರ್ಮಾಣದೊಂದಿಗೆ 20 ಕೊಳಚೆ ಪ್ರದೇಶದ ಪುನರ್ವಸತಿಯನ್ನು ಪರಿಗಣಿಸಲಾಗಿದೆ. ವಿವಿಧ ಬಡಾವಣೆಗಳಲ್ಲಿ 15 ಪ್ಯಾಕೇಜ್‌ಗಳಲ್ಲಿ ಕಾಮಗಾರಿಯನ್ನು ವಹಿಸಲಾಗಿರುತ್ತದೆ. ಇದರಲ್ಲಿ 14 ಪ್ಯಾಕೇಜ್ ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ಕಾರ್ಯಪಾಲಕ ಇಂಜಿನಿಯರ್ ತಿಳಿಸಿದರು. 2788 ಮನೆಗಳ ಪೈಕಿ 2708 ಮನೆಗಳ ಕಾಮಗಾರಿ ಪ್ರಾರಂಭಿಸಲಾಗಿರುತ್ತದೆ ಎಂದು ತಿಳಿಸಿದರು.

**ಹಂತ – 2 :** ಈ ಹಂತದಲ್ಲಿ 2500 ಮನೆಗಳ ನಿರ್ಮಾಣದೊಂದಿಗೆ 46 ಕೊಳಚೆ ಪ್ರದೇಶಗಳ ಪುನರ್ವಸತಿಯನ್ನು ಪರಿಗಣಿಸಲಾಗಿರುತ್ತದೆ. 8 ಪ್ಯಾಕೇಜ್‌ಗಳಲ್ಲಿ ಕಾಮಗಾರಿಯನ್ನು ವಹಿಸಲಾಗಿದ್ದು, ಎಲ್ಲಾ ಪ್ಯಾಕೇಜ್‌ಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ. 2500 ಮನೆಗಳಲ್ಲಿ 2488 ಮನೆಗಳು ಪ್ರಗತಿಯಲ್ಲಿದ್ದು, ಅದರಲ್ಲಿ 626 ಮನೆಗಳು ಪೂರ್ಣಗೊಂಡಿದ್ದು, 224 ಮನೆಗಳು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ.

**ಹಂತ – 3 :** ಈ ಹಂತದಲ್ಲಿ 1040 ಮನೆಗಳನ್ನು ಪರಿಗಣಿಸಲಾಗಿರುತ್ತದೆ. ಕಾಮಗಾರಿಯನ್ನು ಒಂದು ಪ್ಯಾಕೇಜ್‌ನಲ್ಲಿ ವಹಿಸಲಾಗಿದ್ದು 1040 ಮನೆಗಳ ಪೈಕಿ 192 ಮನೆಗಳ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಫಲಾನುಭವಿಗಳ ಪಟ್ಟಿ ಹಾಗೂ ಫಲಾನುಭವಿಗಳನ್ನು ಗುರುತಿಸಲು ಅಳವಡಿಸಿಕೊಂಡಿರುವ ಮಾನದಂಡದ ಬಗ್ಗೆ ಚರ್ಚಿಸಲಾಯಿತು. ಫಲಾನುಭವಿಗಳನ್ನು ಆಯ್ಕೆಮಾಡಲು ಅನುಸರಿಸಿರುವ ಮಾನದಂಡದ ಬಗ್ಗೆ ಕಾರ್ಯಪಾಲಕ ಇಂಜಿನಿಯರ್ ಕೊಳಚೆ ನಿರ್ಮೂಲನ ಮಂಡಳಿ ಇವರು ವಿವರಿಸಿದರು ಹಾಗೂ ಮಂಡಳಿ ವತಿಯಿಂದ ಮಾಡಲಾದ 2001 ರ ಸಾಮಾಜಿಕ, ಆರ್ಥಿಕ ಸಮೀಕ್ಷೆ ಪಟ್ಟಿಯಂತೆ ಫಲಾನುಭವಿಗಳನ್ನು ಗುರುತಿಸಲಾಗಿದೆ ಎಂದು ತಿಳಿಸಿದರು. ಮೊದಲನೆ ಹಂತದ ಫಲಾನುಭವಿಗಳ ಪಟ್ಟಿಯನ್ನು ಮಂಡಳಿಗೆ ಅನುಮೋದನೆ ಮಂಡಳಿಗೆ ಕಳುಹಿಸಿರುವುದಾಗಿ ಕಾರ್ಯಪಾಲಕ ಇಂಜಿನಿಯರ್ ತಿಳಿಸಿದರು.

ಕಾರ್ಯಪಾಲಕ ಇಂಜಿನಿಯರ್‌ರವರು ಕಳುಹಿಸಿರುವ ಫಲಾನುಭವಿಗಳ ಪಟ್ಟಿಯನ್ನು ಹಾಗೂ ಮೊದಲನೆ ಹಂತದ 2788 ಫಲಾನುಭವಿಗಳ ಪಟ್ಟಿಯನ್ನು ಪರಿಶೀಲಿಸುವಂತೆ ಕಾರ್ಯದರ್ಶಿಗಳು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಯೋಜನಾ ನಿರ್ದೇಶಕರು, ಡಿಯುಡಿಸಿ ಇವರಿಗೆ ನಿರ್ದೇಶಿಸಲಾಯಿತು. ಅಲ್ಲದೆ ಸಾಮಾಜಿಕ, ಆರ್ಥಿಕ ಸಮೀಕ್ಷೆ ಪ್ರಕಾರ ನಿಗಧಿಪಡಿಸಿರುವ ಸೂಚನೆಗಳ ವಿವರಗಳನ್ನು ಕುರಿತು ನೋಡುವಂತೆ ತಿಳಿಸಲಾಯಿತು.

ಕಾರ್ಯಪಾಲಕ ಇಂಜಿನಿಯರ್ ರವರು ಸಾಮಾನ್ಯವಾಗಿ ತಾತ್ಕಲಿಕ ತಂಗುವ ವ್ಯವಸ್ಥೆಯನ್ನು (Transit Accommodation) ಒದಗಿಸುವ ಬಗ್ಗೆ ಸರಿಯಾದ ಕ್ರಮಗಳನ್ನು ಕೈಗೊಳ್ಳದಿರುವುದನ್ನು ಪರಿವೀಕ್ಷಣಾ ಸಮಯದಲ್ಲಿ ಗಮನಿಸಲಾಗಿದೆಯೆಂದು ಅಧ್ಯಕ್ಷರು ತಿಳಿಸಿದರು. ಸೋನಿಯಗಾಂಧಿ ಬಡಾವಣೆಯಲ್ಲಿ ಪಾರ್ಕ್ ಮತ್ತು ಸಿ.ಎ. ನಿವೇಶನದಲ್ಲಿ ತಂಗುವ ವ್ಯವಸ್ಥೆ ಮಾಡಲಾಗಿರುತ್ತದೆ. ಏಕಲವ್ಯ ನಗರದಲ್ಲಿ ಸರ್ಕಾರಿ ಭೂಮಿಯಲ್ಲಿ ಕೊಳಚೆ ನಿವಾಸಿಗಳನ್ನು ಸ್ಥಳಾಂತರಿಸಲಾಗಿರುತ್ತದೆ. ಸರ್ಕಾರಿ ಜಾಗದಲ್ಲಿ ಸ್ಥಳಾಂತರಿಸಲು ಅನುಮೋದನೆ ನೀಡಿರುವ ಬಗ್ಗೆ ವಿವರಗಳನ್ನು ಸಲ್ಲಿಸುವಂತೆ ಕಾರ್ಯಪಾಲಕ ಇಂಜಿನಿಯರ್ ರವರಿಗೆ ನಿರ್ದೇಶಿಸಲಾಯಿತು.

ಡೊಂಗ್ರಿ ಕಾಲೋನಿಯಲ್ಲಿ ಮನೆಗಳನ್ನು ಓಣಿಯಲ್ಲಿ (conservancy) ನಿರ್ಮಿಸಲಾಗಿರುತ್ತದೆ. ಈ ಜಾಗದಲ್ಲಿ ಮನೆಗಳನ್ನು ನಿರ್ಮಿಸುವಂತೆ ನೀಡಿರುವ ಅನುಮತಿ ಬಗ್ಗೆ ವಿವರಗಳನ್ನು ಸಲ್ಲಿಸುವಂತೆ ಕಾರ್ಯಪಾಲಕ ಇಂಜಿನಿಯರ್‌ರಿಗೆ ಸೂಚಿಸಲಾಯಿತು.

ಯಾದವಗಿರಿಯಲ್ಲಿ 114 ಮನೆಗಳನ್ನು ಇನ್ನೂ ನಿರ್ಮಿಸಬೇಕಾಗಿದ್ದು, ತಾತ್ಕಲಿಕ ತಂಗು ವ್ಯವಸ್ಥೆ ಮಾಡಲು ಸ್ಥಳಾವಕಾಶ ಲಭ್ಯವಿಲ್ಲವೆಂದು ತಿಳಿಸಿದರು. ಸದರಿ ಸ್ಥಳವನ್ನು ಯೋಜನಾ ನಿರ್ದೇಶಕರು ಡಿಯುಡಿಸಿ ಇದರೊಂದಿಗೆ ಪರಿವೀಕ್ಷಣೆ ನಡೆಸಿ ವರದಿ ನೀಡುವಂತೆ ಅಧೀಕ್ಷಕ ಇಂಜಿನಿಯರ್ ಜೆಎನ್‌ನರ್ಮ್ ರವರಿಗೆ ಸೂಚಿಸಲಾಯಿತು.

ಪ್ರತಿ ಪ್ಯಾಕೇಜ್‌ನ ಕಾಮಗಾರಿಗಳ ಪೂರ್ಣಗೊಳಿಸಬೇಕಾದ ಅವಧಿ ವಿವರ, ಕಾಮಗಾರಿ ಪೂರ್ಣಗೊಳಿಸಲು ಆಗಿರುವ ವಿಳಂಬ, ಇದರ ಬಗ್ಗೆ ತೆಗೆದುಕೊಳ್ಳಲಾಗಿರುವ ಕ್ರಮದ ಬಗ್ಗೆ ವಿವರಗಳನ್ನು ಕೂಡಲೇ ಸಲ್ಲಿಸುವಂತೆ ಕಾರ್ಯಪಾಲಕ ಇಂಜಿನಿಯರ್ ಕೆಎಸ್‌ಸಿಬಿ ಯವರಿಗೆ ತಿಳಿಸಲಾಯಿತು. ಹಾಗೂ ಸದರಿ ವಿವರಗಳನ್ನು ಪರಿಶೀಲಿಸಿ ವರದಿ ನೀಡುವಂತೆ ಅಧೀಕ್ಷಕ ಇಂಜಿನಿಯರ್ ಜೆಎನ್‌ನರ್ಮ್‌ರವರಿಗೆ ತಿಳಿಸಲಾಯಿತು. ಅಲ್ಲದೆ ಹಾಲಿ ಇರುವ ಕೊಳಚೆ ಪ್ರದೇಶದ ಜಾಗದ ಭೂಮಾಲೀಕತ್ವದ ಬಗ್ಗೆ, ಮನೆಗಳನ್ನು ನಿರ್ಮಿಸಲು ಪರಿಗಣಿಸಿರುವ ಭೂಮಿಯ ಬಗ್ಗೆ ಹಾಗೂ ತಾತ್ಕಲಿಕ ತಂಗು ವ್ಯವಸ್ಥೆ ಬಗ್ಗೆ ವಿವರಗಳನ್ನು ನೀಡುವಂತೆ ಅಧೀಕ್ಷಕ ಇಂಜಿನಿಯರ್ ಜೆಎನ್‌ನರ್ಮ್ ರವರಿಗೆ ಸೂಚಿಸಲಾಯಿತು.

ಪ್ರತಿ ಮನೆಗಳಿಗೆ ಸೂಕ್ತ ನಂಬರ್ ಗುರುತು ನೀಡಲು ಕ್ರಮ ಕೈಗೊಳ್ಳುವಂತೆ ಈಗಾಗಲೇ 2 ತಿಂಗಳ ಮೊದಲೇ ನಿರ್ದೇಶನ ನೀಡಿದ್ದರೂ, ಕಾರ್ಯಪಾಲಕ ಇಂಜಿನಿಯರ್‌ರವರು ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಆಯುಕ್ತರು, ಮೈಸೂರು ಮಹಾನಗರ ಪಾಲಿಕೆಯ ಇವರು ತಿಳಿಸಿದರು. ಕಾರ್ಯಪಾಲಕ ಇಂಜಿನಿಯರ್ ರವರ ನಿರುತ್ಸಾಹದ ನಡತೆಯ ಬಗ್ಗೆ ಅಧ್ಯಕ್ಷರು ಅಸಮಧಾನವನ್ನು ವ್ಯಕ್ತಪಡಿಸಿದರು ಹಾಗೂ ಇನ್ನೂ 15 ದಿನದೊಳಗಾಗಿ ಎಲ್ಲಾ ತಾತ್ಕಲಿಕ ವ್ಯವಸ್ಥೆ ಮನೆಗಳಿಗೆ ನಂಬರ್ ಗುರುತು ನೀಡುವಂತೆ ನಿರ್ದೇಶಿಸಿದರು. ಗುಡಿಸಲುಗಳ/ತಾತ್ಕಾಲಿಕ ತಂಗುವ ವ್ಯವಸ್ಥೆ ಬಗ್ಗೆ ನಿರತಂರ ಗಮನ ನೀಡಬೇಕಾಗಿ ಸೂಚಿಸಲಾಯಿತು. ನಗರದಲ್ಲಿ ಗುಡಿಸಲುಗಳ ನಿರ್ಮಾಣವನ್ನು ತಡೆಗಟ್ಟಲು ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಲಾಯಿತು.

ರೂಪನಗರದಲ್ಲಿ 156 ಮನೆಗಳು ಸಿದ್ಧವಾಗಿದ್ದು, ಮೂಲಭೂತ ಸೌಕರ್ಯಗಳನ್ನು ಒದಗಿಸಿಲ್ಲದಿರುವುದರಿಂದ ಇನ್ನೂ ಹಂಚಿಕೆ ಮಾಡಲಾಗಿಲ್ಲವೆಂದು ಕಾರ್ಯಪಾಲಕ ಇಂಜಿನಿಯರ್ ತಿಳಿಸಿದರು. ರೂಪನಗರದ ಕೊಳಚೆ ಪ್ರದೇಶದ ಬಗ್ಗೆ ಅಧ್ಯಯನ ಮಾಡಿ ವರದಿ ನೀಡುವಂತೆ ಕಾರ್ಯದರ್ಶಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಇವರಿಗೆ ಸೂಚಿಸಲಾಯಿತು. ವಿದ್ಯುತ್ ಕಾಮಗಾರಿ/ಕೆಲವು ಬಡಾವಣೆಗಳಲ್ಲಿ ನೀರು ಸರಬರಾಜು ಕಾಮಗಾರಿ ನಿರ್ವಹಿಸಲು ರೂ. 6.29 ಕೋಟಿಗಳ ಅವಶ್ಯಕತೆಯಿರುವುದಾಗಿ ಕಾರ್ಯಪಾಲಕ ಇಂಜಿನಿಯರ್ ತಿಳಿಸಿದರು. ಸದರಿ ಮೊತ್ತವನ್ನು ಪಾಲಿಕೆ ವತಿಯಿಂದ ಭರಿಸುವ ಪ್ರಸ್ತಾವನೆಯನ್ನು ಕೌನ್ಸಿಲಿನ ಸಲಹಾ ಸಮಿತಿ ತಿರಸ್ಕರಿಸಿದೆಯೆಂದು ಪಾಲಿಕೆ ಆಯುಕ್ತರು ತಿಳಿಸಿದರು. ಪ್ಯಾಕೇಜ್‌ವಾರು ಅವಶ್ಯಕತೆಯ ಬಗ್ಗೆ ವಿವರಗಳನ್ನು ಸಲ್ಲಿಸುವಂತೆ ಕಾರ್ಯಪಾಲಕ ಇಂಜಿನಿಯರ್ ರವರಿಗೆ ಸೂಚಿಸಲಾಯಿತು. ಪ್ರತಿ ಹಂತದಲ್ಲಿ ಪ್ರತ್ಯೇಕವಾಗಿ ಪ್ರತಿ ತಿಂಗಳು ವಾಸಕ್ಕೆ ಸಿದ್ಧವಿರುವ ಮನೆಗಳ ಬಗ್ಗೆ ವಿವರಗಳನ್ನು ಮತ್ತು ಮನೆಗಳನ್ನು ಹಂಚಿಕೆ ಮಾಡಿದ ನಂತರ ವಾಸಕ್ಕೆ ಬಂದಿರುವ ಮನೆಗಳ ವಿವರ, ವಾಸಕ್ಕೆ ಬಂದಿಲ್ಲದಿರುವ ಮನೆಗಳ ವಿವರ ಹಾಗೂ ಇದಕ್ಕೆ ಕಾರಣದ ಬಗ್ಗೆ ವರದಿಯನ್ನು ಸಲ್ಲಿಸುವಂತೆ ಕಾರ್ಯಪಾಲಕ ಇಂಜಿನಿಯರ್ ರವರಿಗೆ ಸೂಚಿಸಲಾಯಿತು.

ಕಾಮಗಾರಿಯ ಪರಿವೀಕ್ಷಣಾ ಸಮಯದಲ್ಲಿ ಫಲಾನುಭವಿಗಳು ಕೋರಿರುವಂತೆ ಎಲ್ಲಾ ಮನೆಗಳಲ್ಲಿ ಅಡುಗೆ ಕೋಣೆಯಲ್ಲಿ ನಲ್ಲಿ ನೀರಿನ ವ್ಯವಸ್ಥೆಯನ್ನು ಒದಗಿಸುವುದು, ವರಾಂಡ ವಿಸ್ತೀರ್ಣವನ್ನು ಹೆಚ್ಚಿಸುವ ಬಗ್ಗೆ, ಮನೆಯ ಸುತ್ತಲೂ ಫ್ಲಾಗಿಂಗ್ ಕಾಂಕ್ರಿಟ್ ಹಾಕುವ ಬಗ್ಗೆ ಪರಿಶೀಲಿಸುವಂತೆ ಸೂಚಿಸಲಾಯಿತು. ಅಲ್ಲದೇ ಮಹಡಿ ಮೆಟ್ಟಿಲುಗಳನ್ನು ಹೆಚ್ಚಿನ ಅಗಲದಲ್ಲಿ ಒದಗಿಸುವ ಬಗ್ಗೆ ಪರಿಶೀಲಿಸುವಂತೆ ಕಾರ್ಯಪಾಲಕ ಇಂಜಿನಿಯರ್ ರವರಿಗೆ ಆದೇಶಿಸಲಾಯಿತು.

ಹೊಗೆ ರಹಿತ ಒಲೆಗಳ ಲಭ್ಯತೆ ಬಗ್ಗೆ ಪರಿಶೀಲಿಸಿಲು ಹಾಗೂ ಅದಕ್ಕೆ ತಗಲುವ ಆರ್ಥಿಕ ವಿವರಗಳೊಂದಿಗೆ ವರದಿ ನೀಡಲು ಕಾರ್ಯಪಾಲಕ ಇಂಜಿನಿಯರ್ ರವರಿಗೆ ಸೂಚಿಸಲಾಯಿತು.

ಕಾರ್ಯಪಾಲಕ ಇಂಜಿನಿಯರ್ ರವರು ತಾತ್ಕಲಿಕ ತಂಗುವ ವ್ಯವಸ್ಥೆ (Transit Accommodation) ಮಾಡುವ ಬಗ್ಗೆ ಸಾಮಾನ್ಯವಾಗಿ ಯಾವುದೇ ಸೂಕ್ತ ಎಚ್ಚರಿಕೆ ವಹಿಸಿರುವುದಿಲ್ಲವೆಂದು ಅಧ್ಯಕ್ಷರು ತಿಳಿಸಿದರು. ಈ ಬಗ್ಗೆ ಕಾರ್ಯಪಾಲಕ ಇಂಜಿನಿಯರ್ ರವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ಮಾನ್ಯ ಆಯುಕ್ತರು ಕೊಳಚೆ ನಿರ್ಮೂಲನ ಮಂಡಳಿ ಇವರಿಗೆ ಪತ್ರ ಬರೆಯುವಂತೆ ಅಧ್ಯಕ್ಷರು ಸೂಚಿಸಿದರು.

**2. <u>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕಾಮಗಾರಿಗಳು :</u>**

ಮೈಸೂರು ನಗರದಲ್ಲಿ ಸಾರಿಗೆ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ರೂ. 85.25 ಕೋಟಿಗಳ ಯೋಜನಾ ಮೊತ್ತದೊಂದಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವತಿಯಿಂದ ಕೈಗೆತ್ತಿಕೊಳ್ಳಲಾಗಿದೆ.

7 ಬಸ್ಸ್ ನಿಲ್ದಾಣಗಳ ಪೈಕಿ 3 ನಿಲ್ದಾಣಗಳ ಕಾಮಗಾರಿಗಳು ಪೂರ್ಣಗೊಂಡು ಉದ್ಘಾಟನೆಯಾಗಿರುತ್ತದೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿಗಳು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಇವರು ವಿವರಿಸಿದರು. 3 ಕಾಮಗಾರಿಗಳ ಅಂದರೆ ಕುವೆಂಪುನಗರ, ಸಾತಗಳ್ಳಿ, ಇಲವಾಲದಲ್ಲಿ ಬಸ್ಸ್ ನಿಲ್ದಾಣ ಕಾಮಗಾರಿಗಳು ಪ್ರಗತಿಯಲ್ಲಿದ್ದು ಫೆಬ್ರವರಿ 2011 ರಲ್ಲಿ ಪೂರ್ಣಗೊಳಿಸುವುದಾಗಿ ತಿಳಿಸಿದರು. ಚಾಮುಂಡಿ ಬೆಟ್ಟದ ಕಾಮಗಾರಿಗೆ ಸಂಬಂಧಿಸಿದಂತೆ ಘನ ಉಚ್ಚನ್ಯಾಯಾಲಯವು ತಡೆಯಾಜ್ಞೆ ನೀಡಿದ್ದು, ಸದರಿ ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುತ್ತಿರುವುದಾಗಿ ವಿಭಾಗೀಯ ನಿಯಂತ್ರಣಾಧಿಕಾರಿಗಳು ತಿಳಿಸಿದರು.

**3. <u>ಮೈಸೂರು ಮಹಾನಗರ ಪಾಲಿಕೆ ಕಾಮಗಾರಿಗಳು :</u>**

ಮೈಸೂರು ನಗರದಲ್ಲಿ ದೊಡ್ಡ ಮಳೆ ನೀರು ಚರಂಡಿ ಪುನರ್ ನಿರ್ಮಾಣ ಕಾಮಗಾರಿಗಳನ್ನು ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಕೈಗೆತ್ತಿಕೊಳ್ಳಲಾಗಿರುತ್ತದೆ. ಮೈಸೂರು ನಗರದಲ್ಲಿ 6 ಕಣಿವೆಗಳ ಅಡಿಯಲ್ಲಿ ಬರುವ ಚರಂಡಿಗಳ ಪುನರ್ ನಿರ್ಮಾಣ ಕಾಮಗಾರಿಗಳನ್ನು ರೂ. 347.28 ಕೋಟಿಗಳ ಮೊತ್ತದೊಂದಿಗೆ ಪ್ರಸ್ತಾಪಿಸಲಾಗಿತ್ತು. ಆದರೆ ಎಸಿಎಯನ್ನು ರೂ. 100.00 ಕೋಟಿಗಳಿಗೆ ನಿಗಧಿ ಪಡಿಸಿದ್ದರಿಂದ ಬನ್ನಿಮಂಟಪ ಹಾಗೂ ಹೆಬ್ಬಾಳ ಕೆರೆ ವ್ಯಾಲಿ ಅಡಿಯ ಕಾಮಗಾರಿಗಳನ್ನು ಮಾತ್ರ ಕೈಗೆತ್ತಿಕೊಳ್ಳಲಾಗಿರುತ್ತದೆ ಎಂದು ಅಧೀಕ್ಷಕ ಇಂಜಿನಿಯರ್, ಜೆಎನ್‌ನರ್ಮ್ ಇವರು ವಿವರಿಸಿದರು.

ಕಾಮಗಾರಿಗಳನ್ನು ಟೆಂಡರ್ ಆಧಾರದ ಮೇಲೆ 5 ಪ್ಯಾಕೇಜ್ ನಲ್ಲಿ ವಹಿಸಲಾಗಿದ್ದು, ಇದುವರೆಗೆ ರೂ. 70.50 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ. ಹಾಗೂ ಇದುವರೆಗೆ ರೂ. 31.25 ಕೋಟಿಗಳ ಅನುದಾನ ಬಿಡುಗಡೆಯಾಗಿರುತ್ತದೆ. ಹಾಗೂ ರೂ. 47.86 ಕೋಟಿ ವೆಚ್ಚವಾಗಿರುತ್ತದೆ. ಏಪ್ರಿಲ್ 2010 ರಿಂದ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾಗಿಲ್ಲವೆಂದು ಮತ್ತು ಗುತ್ತಿಗೆದಾರರುಗಳಿಗೆ ರೂ. 28.00 ಕೋಟಿಗಳ ಬಾಕಿ ಬಿಲ್ಲುಗಳು ಪಾವತಿಯಾಗಬೇಕಾಗಿರುತ್ತದೆ ಎಂದು ಅಧೀಕ್ಷಕ ಇಂಜಿನಿಯರ್‌ರವರು ತಿಳಿಸಿದರು. ಬಾಕಿ ಬಿಲ್ಲುಗಳನ್ನು ಪಾವತಿಸಿಲ್ಲದಿರುವುದರಿಂದ ಎಲ್ಲಾ ಗುತ್ತಿಗೆದಾರರುಗಳು ನವೆಂಬರ್ ಮಾಹೆಯಿಂದ ಕಾಮಗಾರಿಗಳ ಪ್ರಗತಿಯನ್ನು ಕಡಿಮೆಗೊಳಿಸಿರುವುದಾಗಿ ತಿಳಿಸಿದರು.

ಅನುದಾನ ಬಿಡುಗಡೆಗಾಗಿ ಪ್ರಸ್ತಾವನೆಯನ್ನು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುವುದಾಗಿ ಪಾಲಿಕೆ ಆಯುಕ್ತರು ವಿವರಿಸಿದರು ಹಾಗೂ ಜನವರಿ 3ನೇ ವಾರದಲ್ಲಿ ನಡೆಯಲಿರುವ ಸಿಎಸ್‌ಎಂಸಿ ಸಭೆಯ ಮುಂದೆ ಸದರಿ ವಿಷಯವು ಮಂಡನೆಯಾಗುವ ಸಾಧ್ಯತೆಯಿದೆ ಎಂದು ತಿಳಿಸಿದರು.

ಬನ್ನಿಮಂಟಪ ವ್ಯಾಲಿ ಚರಂಡಿಯ ಕೊನೆಯ ಭಾಗದಲ್ಲಿರುವ ಭೂಮಿಯ ತೊಂದರೆ ಬಗ್ಗೆ ಹಾಗೂ ಹಳ್ಳ ಹದ್ದುಬಸ್ತು ನಿಗಧಿ ಪಡಿಸಲು ನಡೆಸಲಾಗಿರುವ ರೆವೆನ್ಯೂ ಸರ್ವೆ ಬಗ್ಗೆ ಅಧೀಕ್ಷಕ ಇಂಜಿನಿಯರ್ ರವರು ವಿವರಿಸಿದರು. ಭೂಮಿಯ ತೊಂದರೆಗೆ ಸಂಬಂಧಿಸಿದಂತೆ ಜೆಡಿಟಿಪಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಡಿಡಿಎಲ್ಆರ್ ಇವರನ್ನು ಸಹಾಯಕ್ಕಾಗಿ ಸಂಪರ್ಕಿಸುವಂತೆ ಅಧ್ಯಕ್ಷರು ಸೂಚಿಸಿದರು ಹಾಗೂ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ತೊಂದರೆಯನ್ನು ಬಗೆಹರಿಸುವಂತೆ ಮತ್ತು ಇದನ್ನು ಪರಿಷ್ಕೃತ ಸಿಡಿಪಿಯಲ್ಲಿ ಅಳವಡಿಸಿಕೊಳ್ಳುವ ಸಾಧ್ಯತೆ ಬಗ್ಗೆ ಪರಿಶೀಲಿಸಲು ಜೆಡಿಟಿಪಿ/ಡಿಡಿಎಲ್ಆರ್ ಇವರಿಗೆ ಸೂಚಿಸಲಾಯಿತು. ಹೊಸ ಮಳೆ ನೀರು ಹಳ್ಳವನ್ನು ರೆವೆನ್ಯೂ ನಕ್ಷೆಯಲ್ಲಿ ಗುರುತಿಸಿ ಘೋಷಿಸುವ ಬಗ್ಗೆ ಡಿಡಿಎಲ್ಆರ್ ಇವರೊಡನೆ ಸಮಾಲೋಚಿಸುವಂತೆ ನಿರ್ದೇಶಿಸಲಾಯಿತು.

ಇತ್ತೀಚಿನ ಪರಿವೀಕ್ಷಣೆಯ ಸಮಯದಲ್ಲಿ ಗಮನಿಸಿರುವಂತೆ ಮೋರಿಯ ನಿಗಧಿತ ಅಗಲಕ್ಕಿಂತ ಹೆಚ್ಚಿನ ಅಗಲದ ಲಭ್ಯತೆ ಇರುವ ಕಡೆಗಳಲ್ಲಿ ಕಾಂಕ್ರಿಟ್ ಕಾಮಗಾರಿಯ ಬದಲಾಗಿ ಪಿಚ್ಚಿಂಗ್ ಕಾಮಗಾರಿ ನಿರ್ವಹಿಸುವ ಬಗ್ಗೆ ಪರಿಶೀಲಿಸುವಂತೆ ಅಧ್ಯಕ್ಷರು ಸೂಚಿಸಿದರು. ಅಲ್ಲದೇ, ವೆಚ್ಚ ಕಡಿಮೆಗೊಳಿಸುವ ಸಲುವಾಗಿ ಸೇತುವೆಗಳಿಗೆ ಪ್ರಿಕಾಸ್ಟ್ ಬಾಕ್ಸ್‌ಗಳನ್ನು ಅಳವಡಿಸುವ ಬಗ್ಗೆ ಪರಿಶೀಲಿಸಲು ಸೂಚಿಸಿದರು. ಈ ಬಗ್ಗೆ ನಿರ್ಮಿತಿ ಕೇಂದ್ರದೊಂದಿಗೆ ಆರ್ಥಿಕ ವಿವರಗಳನ್ನು ಲೆಕ್ಕಾಚಾರ ಮಾಡುವಂತೆ ನಿರ್ದೇಶಿಸಲಾಯಿತು.

**4. <u>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾಮಗಾರಿ :</u>**

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ರೂ. 194.54 ಕೋಟಿ ಯೋಜನಾ ವೆಚ್ಚದೊಂದಿಗೆ ಕುಡಿಯುವ ನೀರಿನ ವಿತರಣಾ ಜಾಲದ ಪುನರ್ ನಿರ್ಮಾಣ ಕಾಮಗಾರಿ ಮತ್ತು ರೂ. 108.81 ಕೋಟಿ ಯೋಜನಾ ವೆಚ್ಚದೊಂದಿಗೆ ಕಬಿನಿ ನೀರು ಸರಬರಾಜು ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ.

ಮೈಸೂರು ನಗರದ 65 ವಾರ್ಡ್‌ಗಳಿಗೆ 70 ಡಿಎಂಎಗಳನ್ನು ಮಾಡಲಾಗಿದ್ದು, 24x7 ಯನ್ನು ಹಂತ ಹಂತವಾಗಿ ಕೈಗೆತ್ತಿಕೊಳ್ಳಲಾಗಿದೆ ಎಂದು ಕಾರ್ಯಪಾಲಕ ಇಂಜಿನಿಯರ್‌ರವರು ವಿವರಿಸಿದರು. ಇದರಲ್ಲಿ 2 ಪ್ಯಾಕೇಜ್ ಇರುವುದಾಗಿ ತಿಳಿಸಿದರು. ಮೈಸೂರು ನಗರ ಪ್ರದೇಶದಲ್ಲಿ ಬರುವ ಸಿಎಸ್ಆರ್ ಸಂಖ್ಯೆಗಳನ್ನು ಗುರುತಿಸಲು ಮತ್ತು ಎಲ್ಲಾ ಪ್ಯಾಕೇಜ್‌ಗಳಲ್ಲಿ ಗಮನಹರಿಸುವ ಬದಲು ಪ್ರತಿ ಸಿಎಸ್ಆರ್‌ನಲ್ಲಿ 24x7 ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಅಧ್ಯಕ್ಷರು ಸಲಹೆ ನೀಡಿದರು.

ಈಗಾಗಲೇ 24x7 ಕಾರ್ಯಗತಗೊಳಿಸಲಾಗಿರುವ ಪ್ರದೇಶಗಳಿಗೆ ಸಂಬಂಧಿಸಿದಂತೆ ಹಾಲಿಯಿರುವ ಸಿಎಸ್ಆರ್‌ದಿಂದ 24x7 ಪ್ರದೇಶಗಳಿಗೆ ಹಾಗೂ 24x7 ಇಲ್ಲದ ಪ್ರದೇಶಗಳಿಗೆ ನೀರು ಒದಗಿಸುತ್ತಿರುವ್ಯದಾಗಿ ಕಾರ್ಯಪಾಲಕ ಇಂಜಿನಿಯರ್ ರವರು ವಿವರಿಸಿದರು. ಸಿಎಸ್ಆರ್‌ನಲ್ಲಿ ದುರಸ್ಥಿ ಕಾಮಗಾರಿ ಹಾಗೂ ಕೆಲವು ವೇಳೆ ವಿದ್ಯುಚ್ಛಕ್ತಿ ತೊಂದರೆಯಿಂದ ನಿರಂತರ 24x7 ವಿತರಣೆಯಲ್ಲಿ ತೊಂದರೆಯಾಗುತ್ತಿದೆ ಎಂದು ತಿಳಿಸಿದರು. ಇದಕ್ಕೆ ಸಂಬಂಧಿಸಿದಂತೆ ಸೂಕ್ತ ನಿರ್ವಹಣೆ ಕ್ರಮವನ್ನು ಅಳವಡಿಸುವಂತೆ ಮಾನ್ಯ ಅಧ್ಯಕ್ಷರು ಸಲಹೆ ನೀಡಿದರು.

24x7 ನೀರು ಸರಬರಾಜು ಕಾಮಗಾರಿಯ ಪೈಪ್‌ಲೈನ್‌ಗಳನ್ನು ಅಳವಡಿಸಲು ಅಗೆಯಲಾದ ರಸ್ತೆಗಳನ್ನು ಸೂಕ್ತವಾಗಿ ರಿಸ್ಟೋರ್ ಮಾಡುವಂತೆ ಅಧ್ಯಕ್ಷರು ನಿರ್ದೇಶಿಸಿದರು. 24x7 ಪೈಪ್‌ಲೈನ್ ಕಾಮಗಾರಿಗೆ ಅಗೆಯಲಾದ ರಸ್ತೆ ದುರಸ್ಥಿ ಕಾಮಗಾರಿಗಳನ್ನು ಪರಿಶೀಲಿಸುವಂತೆ, ಸಾರ್ವಜನಿಕರ ತೊಂದರೆಗಳನ್ನು ಅಧ್ಯಯನ ಮಾಡುವಂತೆ, ಸೇವೆಯ ಬಗ್ಗೆ ಸಾರ್ವಜನಿಕರೊಂದಿಗೆ ಚರ್ಚಿಸಲು ಹಾಗೂ ಮೆ॥ ಜೆಸ್ಕೋ ಸರ್ವಿಸ್ ಸ್ಟೇಷನ್‌ಗಳಿಗೆ ಭೇಟಿನೀಡಿ ವರದಿ ನೀಡುವಂತೆ ಕಾರ್ಯದರ್ಶಿ, ಮೈನಪ್ರಾ ಮತ್ತು ಯೋಜನಾ ನಿರ್ದೇಶಕರು ಡಿಯುಡಿಸಿ ಇವರಿಗೆ ಸೂಚಿಸಲಾಯಿತು. ಈ ಬಗ್ಗೆ ಸೂಕ್ತ ಸಹಾಯ ಒದಗಿಸಲು ಕಾರ್ಯಪಾಲಕ ಇಂಜಿನಿಯರ್‌ರವರಿಗೆ ಸೂಚಿಸಲಾಯಿತು.

ಜೆಸ್ಕೋ ಇವರ ಕಾರ್ಯನಿರ್ವಹಣೆ ಬಗ್ಗೆ ಮುಖ್ಯವಾಗಿ ನೀರಿನ ತೆರಿಗೆ ಸಂಗ್ರಹಣೆ ಬಗ್ಗೆ ಪಾಲಿಕೆ ಆಯುಕ್ತರು ವಿವರಿಸಿದರು. ಹಿಂದಿನ ವರ್ಷದ ತೆರಿಗೆ ಸಂಗ್ರಹಣೆಗಿಂತ ಶೇಕಡಾ 2 ರಿಂದ 3ರಷ್ಟು ಹೆಚ್ಚಿಗೆ ತೆರಿಗೆಯನ್ನು ಸಂಗ್ರಹಿಸುವ ಗುರಿಯನ್ನು ಮೆ॥ ಜೆಸ್ಕೋ ಅವರು ಹೊಂದಿರುವುದಾಗಿ ತಿಳಿಸಿದರು.

ಕಾಮಗಾರಿಗಳು ಪ್ರಗತಿಯಲ್ಲಿದ್ದು ಜನವರಿ ಅಂತ್ಯಕ್ಕೆ 30,000 ಸಂಪರ್ಕಗಳನ್ನು ಒದಗಿಸಬೇಕಾಗಿದ್ದು, ಆದರೆ ಇದನ್ನು ಸಾಧಿಸಲು ಸಾಧ್ಯವಿಲ್ಲವೆಂದು ಕಾರ್ಯಪಾಲಕ ಇಂಜಿನಿಯರ್‌ರವರು ವಿವರಿಸಿದರು.

ಕಂಪನಿಯ ಕುಂಠಿತ ಕಾರ್ಯನಿರ್ವಹಣೆ ಬಗ್ಗೆ ತೆಗೆದುಕೊಳ್ಳಲಾಗಿರುವ ಕ್ರಮದ ಬಗ್ಗೆ ಅಧ್ಯಕ್ಷರು ವಿವರಣೆ ಕೇಳಿದರು. ಇದಕ್ಕೆ ಉತ್ತರವಾಗಿ, ಕಾರ್ಯಪಾಲಕ ಇಂಜಿನಿಯರ್‌ರವರು ಗುತ್ತಿಗೆದಾರರ ಬಿಲ್ಲಿನಲ್ಲಿ ಈಗಾಗಲೇ ರೂ. 56.00 ಲಕ್ಷಗಳನ್ನು ತಡೆಹಿಡಿದಿರುವುದಾಗಿ ತಿಳಿಸಿದರು. ಮೊತ್ತವನ್ನು ತಡೆಹಿಡಿಯುವ ಬದಲಾಗಿ ಲಿಕ್ವಿಡೇಟೇಡ್ ಡ್ಯಾಮೇಜಸನ್ನು ಹಾಕುವ ಬಗ್ಗೆ ಪರೀಶೀಲಿಸುವಂತೆ ಅಧ್ಯಕ್ಷರು ನಿರ್ದೇಶಿಸಿದರು.

ಕಬಿನಿ ನೀರು ಸರಬರಾಜು ಯೋಜನೆ ಕಾಮಗಾರಿಗೆ ಸಂಬಂಧಿಸಿದಂತೆ ಭೂಸ್ವಾಧೀನದ ಪರಿಹಾರ ಮೊತ್ತವನ್ನು ಇನ್ನೂ ನೀಡಬೇಕಾಗಿದ್ದು, ಭೂಮಾಲೀಕರು ತ್ವರಿತವಾಗಿ ಪರಿಹಾರ ಧನವನ್ನು ನೀಡುವಂತೆ ಒತ್ತಾಯಿಸುತ್ತಿದ್ದಾರೆಂದು ಮತ್ತು ಕಾಮಗಾರಿ ನಿರ್ವಹಿಸಲು ಅಡಚಣೆ ಮಾಡುತ್ತಿದ್ದಾರೆಂದು ಕಾರ್ಯಪಾಲಕ ಇಂಜಿನಿಯರ್‌ರವರು ತಿಳಿಸಿದರು.

5. <u>ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಕಾಮಗಾರಿಗಳು :</u>

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ವತಿಯಿಂದ ರೂ. 290.02 ಯೋಜನಾ ಮೊತ್ತದೊಂದಿಗೆ ಹೊರ ವರ್ತುಲ ರಸ್ತೆಯನ್ನು 6 ಪಥಗಳಿಗೆ ವಿಸ್ತರಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ.
ಕಾಮಗಾರಿಗಳನ್ನು ಟೆಂಡರ್ ಆಧಾರದ ಮೇಲೆ 4 ಪ್ಯಾಕೇಜ್‌ಗಳಲ್ಲಿ ವಹಿಸಲಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ಆಯುಕ್ತರು ಮೈನಪ್ಪಾ ಇವರು ತಿಳಿಸಿದರು.

ಮೆ॥ ಸ್ಪಾನ್ ಕನ್ಸಲ್‌ಟೆಂಟ್ ಇವರನ್ನು ಪಿಎಂಸಿ ಕನ್ಸಲ್‌ಟೆಂಟ್‌ಯಾಗಿ ನೇಮಿಸಿರುವುದಾಗಿ ಅಧೀಕ್ಷಕ ಇಂಜಿನಿಯರ್ ಮೈನಪ್ಪಾ ಇವರು ವಿವರಿಸಿದರು. ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸಲು ಆಗಿರುವ ವಿಳಂಬದ ಬಗ್ಗೆ ವಿವರಿಸಿದರು. ಸಭೆಯಲ್ಲಿ ಹಾಜರಿದ್ದ ಪಿಎಂಸಿ ಪ್ರತಿನಿಧಿಯು ಕಾಮಗಾರಿಯ ನಿರ್ವಹಣೆ ಬಗ್ಗೆ, ಗುಣ ನಿಯಂತ್ರಣ ಪರಿಶೀಲನಾ ಬಗ್ಗೆ ಲೆವೆಲ್ ಇತ್ಯಾದಿಗಳ ಮಾನಿಟರಿಂಗ್ ಬಗ್ಗೆ ಅವರಿಂದ ನಡೆಸಲಾಗುತ್ತಿರುವ ಚಟುವಟಿಕೆಗಳ ಕುರಿತು ವಿವರಿಸಿದರು.

ರಸ್ತೆ ಎತ್ತರವನ್ನು ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ನಿಗಧಿತ ಸ್ಟಾಂಡರ್ಡ್‌ಗಳಿಗೆ ವ್ಯತ್ಯಾಸವಾಗದಂತೆ ಹಾಲಿಯಿರುವ ಮಟ್ಟಕ್ಕೆ ಕಾಪಾಡುವಂತೆ ಮತ್ತು ವೆಚ್ಚವನ್ನು ಉಳಿಸುವ ಬಗ್ಗೆ ನಿರ್ಧಾರಗಳಿಗೆ ಬದ್ಧರಾಗುವಂತೆ ಅಧ್ಯಕ್ಷರು ನಿರ್ದೇಶಿಸಿದರು. ಅಲ್ಲದೇ ಸರ್ವಿಸ್ ರಸ್ತೆಯನ್ನು ಮೂಲ ರಸ್ತೆಯ ಮಟ್ಟಕ್ಕೆ ಎತ್ತರಿಸದಂತೆ ಸೂಚಿಸಿದರು.

ಕಾಮಗಾರಿಗಳ ಗುಣಮಟ್ಟವನ್ನು ಸೂಕ್ತವಾಗಿ ನಿಯಂತ್ರಿಸಲು ಮತ್ತು ಕಾಮಗಾರಿಯ ಪ್ರಗತಿಯಲ್ಲಿ ಕುಂಠಿತವಾದಲ್ಲಿ ಸೂಕ್ತ ಲಿಕ್ವಿಡೇಟೇಡ್ ಡ್ಯಾಮೇಜಸನ್ನು ಹಾಕುವ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಪಿಎಂಸಿ ಅವರಿಗೆ ನಿರ್ದೇಶಿಸಲಾಯಿತು. ಇಲಾಖಾವತಿಯಿಂದ ಉಂಟಾದ ವಿಳಂಬದ ಕಾರಣಗಳನ್ನು ಹಾಗೂ ಗುತ್ತಿಗೆದಾರರಿಂದುಂಟಾದ ವಿಳಂಬದ ಕಾರಣಗಳನ್ನು ಪ್ರತ್ಯೇಕಿಸಿ ದಾಖಲಿಸುವಂತೆ ನಿರ್ದೇಶಿಸಲಾಯಿತು. ಗುತ್ತಿಗೆದಾರರಿಗೆ 2 ಶಿಫ್ಟ್‌ಗಳಲ್ಲಿ ಕೆಲಸ ನಿರ್ವಹಿಸುವಂತೆ ಸೂಚಿಸಲು ಮತ್ತು ಅದರಂತೆ ಪಿಎಂಸಿ ಅವರು ಸೂಕ್ತ ವ್ಯವಸ್ಥೆ ಮಾಡಿಕೊಳ್ಳಲು ನಿರ್ದೇಶಿಸಿದರು.

**6. <u>ಇತರೆ ವಿಷಯಗಳು :</u>**

ಕಾರ್ಯಕಾರಿ ಸಮಿತಿಯಲ್ಲಿ ಒಬ್ಬ ಆರ್ಥಿಕ ಅಧಿಕಾರಿಯನ್ನು ಸೇರಿಸಿಕೊಳ್ಳುವ ಬಗ್ಗೆ ಅಧೀಕ್ಷಕ ಇಂಜಿನಿಯರ್ ಜೆಎನ್‌ನರ್ಮ್ ಇವರು ಸಲಹೆ ನೀಡಿದರು. ಇದನ್ನು ಪರಿಗಣಿಸಲು ಅನುಕೂಲವಾಗುವಂತೆ, ಒಬ್ಬ ಸೂಕ್ತ ಸಮರ್ಥ ಆರ್ಥಿಕ ಅಧಿಕಾರಿಯನ್ನು, ಪ್ರಸ್ತಾಪಿಸಲು ಸೂಚಿಸಲಾಯಿತು.

ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಜಿಲ್ಲಾಧಿಕಾರಿಗಳು,
ಮೈಸೂರು ಜಿಲ್ಲೆ,
ಹಾಗೂ ವಿಶೇಷಾಧಿಕಾರಿಗಳು ಜೆಎನ್‌ನರ್ಮ್,
ಮೈಸೂರು.

ಪ್ರತಿಗಳನ್ನು :

1. ಆಪ್ತಕಾರ್ಯದರ್ಶಿಗಳು, ಸನ್ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಇವರಿಗೆ ಕಳುಹಿಸುತ್ತಾ ಮಾನ್ಯ ಸಚಿವರ ಗಮನಕ್ಕೆ ತರಲು ಕೋರಿದೆ.
2. ಶ್ರೀ ಹೆಚ್. ವಿಶ್ವನಾಥ್, ಮಾನ್ಯ ಲೋಕಸಭಾ ಸದಸ್ಯರು, ಮೈಸೂರು.
3. ಶ್ರೀ ತನ್ವೀರ್ ಸೇಠ್, ಮಾನ್ಯ ವಿಧಾನಸಭಾ ಸದಸ್ಯರು, ನರಸಿಂಹರಾಜ್ ಕ್ಷೇತ್ರ ಮೈಸೂರು.
4. ಶ್ರೀ ಸತ್ಯನಾರಯಣ, ಮಾನ್ಯ ವಿಧಾನಸಭಾ ಸದಸ್ಯರು, ಚಾಮುಂಡೇಶ್ವರಿ ಕ್ಷೇತ್ರ ಮೈಸೂರು.
5. ಪೂಜ್ಯ ಮಹಾಪೌರರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು.
6. ಪೂಜ್ಯ ಉಪ ಮಹಾಪೌರರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು.
7. ಪ್ರಧಾನ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ ಸಹಕಾರ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಎಂ.ಎಸ್. ಕಟ್ಟಡ, ಬೆಂಗಳೂರು.
9. ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು.
10. ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು, ಕೆಯುಐಡಿಎಫ್‌ಸಿ, ಬೆಂಗಳೂರು.
12. ವ್ಯವಸ್ಥಾಪಕ ನಿರ್ದೇಶಕರು, ಕೆಯುಡಬ್ಲ್ಯೂಎಸ್ & ಡಿಬಿ ಬೆಂಗಳೂರು.
13. ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಆರ್‌ಟಿಸಿ, ಬೆಂಗಳೂರು.
14. ಜಿಲ್ಲಾಧಿಕಾರಿಗಳ ಆಪ್ತಸಹಾಯಕರು, ಮೈಸೂರು ಜಿಲ್ಲೆ, ಮೈಸೂರು.
15. ಆಯುಕ್ತರು, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಬೆಂಗಳೂರು.
16. ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು.
17. ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.
18. ಕಾರ್ಯದರ್ಶಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.
19. ಯೋಜನಾ ನಿರ್ದೇಶಕರು, ಡಿಯುಡಿಸಿ, ಜಿಲ್ಲಾಧಿಕಾರಿಗಳ ಕಛೇರಿ, ಮೈಸೂರು.
20. ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕೆಎಸ್‌ಆರ್‌ಟಿಸಿ, ಮೈಸೂರು.
21. ಕಾರ್ಯಪಾಲಕ ಇಂಜಿನಿಯರ್, ಕೆಯುಡಬ್ಲ್ಯೂಎಸ್ & ಡಿಬಿ, ಜೆಎನ್‌ನರ್ಮ್ ವಿಭಾಗ, ಮೈಸೂರು.
22. ಕಾರ್ಯಪಾಲಕ ಇಂಜಿನಿಯರ್, ಕೆಎಸ್‌ಸಿಬಿ, ಜೆಎನ್‌ನರ್ಮ್ ವಿಭಾಗ, ಮೈಸೂರು.
23. ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಮೈಸೂರು.
24. ಜಂಟಿ ನಿರ್ದೇಶಕರು, ನಗರ ಯೋಜನೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.
25. ಉಪನಿರ್ದೇಶಕರು, ಭೂ ದಾಖಲೆಗಳು, ಜಿಲ್ಲಾಧಿಕಾರಿಗಳ ಕಛೇರಿ, ಮೈಸೂರು.

ಜಿಲ್ಲಾಧಿಕಾರಿಗಳು,
ಮೈಸೂರು ಜಿಲ್ಲೆ,
ಹಾಗೂ ವಿಶೇಷಾಧಿಕಾರಿಗಳು ಜೆಎನ್‌ನರ್ಮ್,
ಮೈಸೂರು.